O.S .No.367/2015
PW-1

ದಿನಾಂಕ: 17-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು 4 ನೇ ಪ್ರತಿವಾದಿ ಪರ ಶ್ರೀ ಎಸ್.ಎಸ್.ಜಿ. ವಕೀಲರಿಂದಃ**

4 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಸಲ್ಲಿಸಿದ ತಕರಾರಿನ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲ ಎಂದು ಹೇಳುತ್ತಾರೆ. ನೀವು ಮೃತ ಈಶ್ವರಚಾರಿ ರವರ ಮಗ ಎಂದು ತೋರಿಸಲು ಆರ್.ಡಿ. ವಂಶವೃಕ್ಷ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನೀವು ಮೃತ ಈಶ್ವರಚಾರಿ ರವರ ಮಗ ಅಲ್ಲ ಎಂದರೆ ಸರಿಯಲ್ಲ. ನೀವು ಮೃತ ಈಶ್ವರಚಾರಿ ರವರ ಮಗ ಎಂದು ತೋರಿಸಲು ಆಧಾರ ಕಾರ್ಡ್, ಚುನಾವಣೆ ಗುರುತಿನ ಚೀಟಿ, ಇತರೆ ಗುರುತಿನ ಚೀಟಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ಹೇಳುತ್ತಾರೆ.

ಮನೆ ನಂ.53, ಕೋಟೆಮಾಳ, ಬೆಳಗೋಳ ಗ್ರಾಮ ಮತ್ತು ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿರುವ ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಮೃತ ಈಶ್ವರಚಾರಿ ರವರ ಆಸ್ತಿಗಳು ಎಲ್ಲೆಲ್ಲಿ ಇವೆ, ಎಷ್ಟಿವೆ ಎಂದು ನಿಮಗೆ ಗೊತ್ತಿಲ್ಲ ಸರಿ. ನಿಮಗೆ ಗೊತ್ತಿಲ್ಲದೇ ಇರುವುದರಿಂದ ಮೃತ ಈಶ್ವರಚಾರಿ ರವರಿಗೆ ಸೇರಿದ ಎಲ್ಲ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಅವೆಲ್ಲ ಮಾರಾಟವಾಗಿವೆ ಎಂದು ಹೇಳುತ್ತಾರೆ.

ನಿಮಗೆ ಸೇರಿದ ಒಟ್ಟು 3 ಮನೆಗಳಿವೆ ಎಂದರೆ ಸರಿ. ಸದರಿ ಮನೆಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಲ್ಲಿ ಆಸ್ತಿ ಯಾವುದನ್ನು ಸೇರಿಸಿಲ್ಲ ಎಂದು ಹೇಳುತ್ತಾರೆ. ಮೃತ ಈಶ್ವರಚಾರಿ ಕುಟುಂಬಕ್ಕೆ ಸೇರಿದ 4 ಮನೆಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಅವುಗಳೆಲ್ಲ ಮಾರಾಟವಾಗಿವೆ ಎಂದು ಹೇಳುತ್ತಾರೆ ಮನೆಗಳು ಮಾರಾಟವಾಗಿರುವ ಬಗ್ಗೆ ನಿಮ್ಮ ವಾದ ಪತ್ರದಲ್ಲಿ ಪ್ರಸ್ತಾಪಿಸಿಲ್ಲ ಎಂದರೆ ಸರಿ. ಮಾರಾಟವಾದ ಆಸ್ತಿಗಳನ್ನು, ಖರೀದಿದಾರರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನೀವು ಮೃತ ಈಶ್ವರಚಾರಿ ರವರ ಮಗ ಎಂದು ತೋರಿಸಲು ವಂಶವೃಕ್ಷ ಕೊಟ್ಟಿಲ್ಲ ಎಂದರೆ

ಸರಿ. ಮೃತ ಈಶ್ವರಚಾರಿ ರವರು ಯಾವಾಗ ಮೃತಪಟ್ಟರು ಎಂದು ನಿಮ್ಮ ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿನ್ನ ಜನ್ಮ ದಿನಾಂಕ, ತಿಂಗಳು, ವರ್ಷ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಮೃತ ಈಶ್ವರಚಾರಿ ದಿನಾಂಕ, ತಿಂಗಳು, ವರ್ಷ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ವಾದ ಪತ್ರದಲ್ಲಿ ನೀವು ಮೃತ ಈಶ್ವರಚಾರಿ ರವರ ಎಷ್ಟನೇ ಮಗ ಎಂದು ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಿದ್ದೇನೆ ಎಂದು ಹೇಳುತ್ತಾರೆ. ವಾದ ಪತ್ರದಲ್ಲಿ ಮೃತ ಈಶ್ವರಚಾರಿ ರವರಿಗೆ ನೀವು ಎಷ್ಟನೇ ಮಗ ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿ 4 ನೇ ಮಗ ಎಂದು ಬರೆಸಿದ್ದೇನೆ ಹೇಳುತ್ತಾರೆ. ಮೃತ ಈಶ್ವರಚಾರಿರವರಿಗೆ 4 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು ಎಂದು ಹೇಳುತ್ತಾರೆ. ಅವರುಗಳೆಂದರೆ ಕಮಲಮ್ಮ, ನಿಂಗಾಚಾರಿ, ಸಾವಿತ್ರಮ್ಮ, ವಿಶಕಂಠ, ನಾನು, ಸೋಮಶೇಖರ, ಕೃಷ್ಣಮ್ಮ ಎಂದು ಹೇಳುತ್ತಾರೆ. ಸದರಿಯವರನ್ನು ದಾವೆಯಲ್ಲಿ ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸರಿ.

ನೀವು ನಿಮ್ಮ ವಾದ ಪತ್ರದಲ್ಲಿ ನೀವು ಬೆಳಗೋಳಕ್ಕೆ ಯಾವ ಕಾರಣಕ್ಕೆ ಹೋದಿರಿ, ಮೃತ ಈಶ್ವರಚಾರಿ ಮತ್ತು ಅವರ ಉಳಿದ ಮಕ್ಕಳು ಚಲ್ಲಹಳ್ಳಿಯಲ್ಲಿ ಉಳಿದುಕೊಂಡರು ಎಂದು ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಿದ್ದೇನೆ ಎಂದು ಹೇಳುತ್ತಾರೆ. ನೀವು ನಿಮ್ಮ ವಾದ ಪತ್ರದಲ್ಲಿ ಬೆಳಗೋಳಕ್ಕೆ ಯಾವಾಗ ಹೋದಿರಿ ಎಂದು ಬರೆಸಿಲ್ಲ ಎಂದರೆ ಸಾಕ್ಷಿ ನಾನು 10 ವರ್ಷದವನಿದ್ದಾಗ ಹೋದೆ ಎಂದು ಹೇಳುತ್ತಾರೆ. ಯಾರ್ಯಾರು ಬೆಳಗೋಳಕ್ಕೆ ಹೋದಿರಿ ಎಂದರೆ ಸಾಕ್ಷಿ ನಾವು ಕುಟುಂಬದವರೆಲ್ಲರೂ ಹೋದೆವು ಎಂದು ಹೇಳುತ್ತಾರೆ. ಸೋಮಶೇಖರಚಾರಿ ಎಲ್ಲಿದ್ದಾರೆಂದರೆ ಸಾಕ್ಷಿ ಬೆಳಗೋಳದಲ್ಲಿದ್ದಾರೆ ಎಂದು ಹೇಳುತ್ತಾರೆ.ಸೋಮಶೇಖರಾಚಾರಿ ಬೆಳಗೋಳದಲ್ಲಿ ವಾಸ ಇರುವ ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಅದು ದಾವೆಗೆ ಸಂಬಂಧಿಸಿದ್ದಲ್ಲ ಎಂದು ಹೇಳುತ್ತಾರೆ. ನೀವು ಮೃತ ಈಶ್ವರಚಾರಿ ರವರ ಮಗ ಅಲ್ಲದೇ ಇರುವುದರಿಂದ ಕುಟುಂಬದ ಸಮಸ್ತ ವ್ಯವಹಾರಗಳು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಸರಿ. ಮುಂದುವರೆದು ಗೊತ್ತಿಲ್ಲ ಎಂದು ಅಲ್ಲ, ಅವೆಲ್ಲ ಮಾರಾಟವಾಗಿವೆ ಎಂದು ಹೇಳುತ್ತಾರೆ. ಮೃತ ಈಶ್ವರಚಾರಿ ರವರ

ಕುಟುಂಬದ ವ್ಯವಹಾರ ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ  ಎಂದು ಹೇಳುತ್ತಾರೆ.

ಇತ್ತೀಚೆಗೆ ಜಮೀನಿನ ಬೆಲೆ ಬಿಳಿಕೆರೆ ಆಸುಪಾಸಿನಲ್ಲಿ ಹೆಚ್ಚಾಗಿದೆ ಎಂದರೆ ಸಾಕ್ಷಿ ಈಗ ಆಗಿದೆ  ಎಂದು ಹೇಳುತ್ತಾರೆ. ಜಮೀನಿನ ಬೆಲೆ ಹೆಚ್ಚಾದ್ದರಿಂದ ಸುಳ್ಳು ಸಂಬಂಧವನ್ನು ಸೃಷ್ಟಿಸಿ ಸುಳ್ಳು ದಾವೆ ಹೂಡಿದ್ದೀರಿ  ಎಂದರೆ  ಸರಿಯಲ್ಲ. ನಿಮ್ಮ ವಾದ ಪತ್ರದಲ್ಲಿ ನೀವು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದು, ಒಟ್ಟು ಕುಟುಂಬದಲ್ಲಿ ಆಸ್ತಿಗಳನ್ನು ಅನುಭೋಗ ಮಾಡುತ್ತಿದ್ದೇವೆಂದು ಬರೆಸಿಲ್ಲ ಎಂದರೆ ಸಾಕ್ಷಿ ನಾವು ಒಟ್ಟಿಗೆ ವಾಸ ಇಲ್ಲ  ಎಂದು ಹೇಳುತ್ತಾರೆ. ನೀವು ಯಾವ ಕಾರಣಕ್ಕಾಗಿ ಬೇರೆ ಬೇರೆ ವಾಸ ಇದ್ದೀರಿ ಎಂದು ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿಯನ್ನು ನನ್ನ ತಂಗಿ ಕೃಷ್ಣಮ್ಮ ನೋಡಿಕೊಳ್ಳುತ್ತಿದ್ದರು. ನೀವು ಕೃಷ್ಣಮ್ಮನ ಅಣ್ಣ ಅಲ್ಲದೇ ಇರುವುದರಿಂದ ಹಾಗೂ 1 ನೇ ಪ್ರತಿವಾದಿಯ ಮಗನಲ್ಲದೇ ಇರುವುದರಿಂದ 1 ನೇ ಪ್ರತಿವಾದಿಯನ್ನು ನೋಡಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು).**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.